ಶ್ರೀ ಬಿ. ರಾಚಯ್ಯ.— ಮಾನ್ಯ ಸದಸ್ಯರು ಕೇಳುವ ಸಿಬ್ಬಂದಿ ವರ್ಗದ ವಾಸದ ಕಟ್ಟಡ ಇತ್ಯಾದಿಗಳನ್ನು ಸೇರಿಸಿ ಇರುವ ಪ್ರಾಜೆಕ್ಟ್ ಬಗ್ಗೆ ತತ್‌ಕ್ಷಣ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು — ಶ್ರೀಮತಿ ಮುಕ್ತರುನ್ನೀಸಾ ಬೇಗಂರವರೇ ಪ್ರಶ್ನೆ ಕೇಳಿ, ಮಾನ್ಯ ಸಚಿವರು ಅವರ ಪ್ರಶ್ನೆಗೆ ಉತ್ತರವನ್ನು ಕೊಡಬೇಕು.

ಆಸ್ಪತ್ರೆಗಳಲ್ಲಿ ನೈರ್ಮಲ್ಯದ ಅಭಾವ

೨೪೫. ಶ್ರೀಮತಿ ಮುಕ್ತರುನ್ನೀಸಾ ಬೇಗಂ (ನರಸಿಂಹರಾಜ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಾಸ್ಥ್ಯ ಮತ್ತು ಸ್ವಚ್ಛತೆಯ ಸ್ಥಿತಿಯು ಅವನತಿಗೊಂಡಿರುವ ವಿಚಾರ ಸರ್ಕಾರದವರಿಗೆ ತಿಳಿದಿದೆಯೇ ?

ಆ) ಪ್ರಾಣರಕ್ಷಕ ಔಷಧಿಗಳು ಆಸ್ಪತ್ರೆಯಲ್ಲಿಲ್ಲದಿರುವ ವಿಚಾರ ಅವರಿಗೆ ತಿಳಿದಿದೆಯೇ ?

ಇ) ಮಂದ್ರಿತ ಫಾರಂಗಳು ಹಾಗೂ ಪ್ರಿಸ್ಕ್ರಿಪ್ಷನ್ ಚೀಟಿಗಳು ಲಭ್ಯವಿಲ್ಲ ಹಾಗೂ ಕರ್ತವ್ಯ ನಿರತ ವೈದ್ಯರಂಗಳು ಸಣ್ಣ ಚೀಟಿಗಳ ಮೇಲೆ ಕೆ. ಆರ್. ಆಸ್ಪತ್ರೆಯಲ್ಲಿ ಪ್ರಿಸ್ಕ್ರಿಪ್ಷನ್ ನೀಡುತ್ತಿದ್ದರೆಂಬ ವಿಚಾರವೂ ಅವರಿಗೆ ತಿಳಿದಿದೆಯೇ ?

ಈ) ಮೇಲ್ಕಂಡ ನ್ಯೂನತೆಗಳ ಪರಿಹಾರಕ್ಕೆ ಸರ್ಕಾರವು ತಂತ್ರ ಕ್ರಮ ಕೈಗೊಳ್ಳುವುದೆ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸ್ವಚ್ಛತೆ ಹಾಗೂ ಸ್ವಾಸ್ಥ್ಯ ಸ್ಥಿತಿಗಳನ್ನು ಪರಿಪಾಲಿಸಲಾಗುತ್ತಿದೆ.

ಆ) ಇಲ್ಲ

ಇ) ಫಾರಂಗಳ ಅಭಾವವಿತ್ತು. ಈಗ ಅವುಗಳನ್ನು ಸ್ಥಳೀಯವಾಗಿ ಮುದ್ರಣ ಮಾಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ) ಹೌದು

SMT. MUKHTARUNNISA.—Sir, if the condition of the Hospital was good and cleanliness was maintained' I would not have asked this question here. Hon. Minister konws that the condition of K. R. Hospital, which is supposed to have the oldest beautiful building in Mysore city is very bad. In the reply they have said that they are not aware whether life saving drugs are available in the hospital.

ಅಧ್ಯಕ್ಷರು.—ದಯವಿಟ್ಟು ತಾವು ನೇರವಾಗಿ ಪ್ರಶ್ನೆ ಕೇಳಿ ಪ್ರಿಯಾಂಬಲ್ ಬೇಡ.

SMT.--MUKTHARUNNISA.—I am just raplying to him. Not only that' even ordinary Novalgin or Anolgin are also not available in KR Hospital. I would like to ask the hon. Minister, since how many years the prescription forms have not been supplied to the hospital. They are using waste papers as the slip and in that the doctors sign When your good self came to know about this? Secondly the Hon. Minister himself knows not only the drugs but also the surgical equipments in the Operation Theatre are not available. I will quote one small incident. The Mysore City Janata Party President Mr. Kempegowda was admitted-he is still in the hospital

and he had a major operation. When they took him to the operation theater, unfortunately the supply of electricity failed and at that time there was no generator. Even the bed in the operation theater is so unhealthy. What doctors can say and They cannot say anything. There are no proper apparatus. There is no chair Nothing. When there was electricity failure, they started searching for generator. When they came to the generator room-the generator is of Tippu Sultan time. The watchman was not available and room was locked. Somebody broke the lock and the operation was done, cutting his leg below the knee. He is an influential Janata Party President. When the influential, important personalities are facing so much difficulty, what about the poor people. (Interruption) It is very serious. God blessed, his life is safe.

MR. SPEAKER.—Please sit down.

ಶ್ರೀಮತಿ ವಂಕ್ಕರುನ್ನಿಸಾ.—ಅಧ್ಯಕ್ಷರೇ, ನನಗೆ ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ ನೀವಾದರೂ ಅವರಿಗೆ ಹೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ ಅವರ ಗಾಬರಿಯ ಜೊತೆಗೆ ನೀವು ಮತ್ತಷ್ಟು ಗಾಬರಿ ಮಾಡಿದರೆ ಹೀಗೆಯೇ ಆಗುವುದು ದಯವಿಟ್ಟು ಗಾಬರಿ ಮಾಡಬೇಡಿ ಅವರು ಹೇಳುತ್ತಿರುವುದು ಸೀರಿಯಸ್ಸಾದ ವಿಚಾರ ಮಾನ್ಯ ಕೆಂಪೇಗೌಡರ ಕಾಲನ್ನು ಅಂಪ್ಯುಟೇಟ್ ಮಾಡಿದ್ದಾರೆ. ಆಪರೇಷನ್ ಥೇಟರಿನಲ್ಲಿ ಆಪರೇಷನ್ ನಡೆಯುತ್ತಿದ್ದಾಗ ಕರೆಂಟ್ ಫೇಲ್ಯೂರ್ ಆಯಿತು ಆಗ ಜನರೇಟರ್‌ನ್ನು ಹುಡುಕಿಕೊಂಡು ಹೋದಾಗ ಅದಿರುವ ಜಾಗಕ್ಕೆ ಲಾಕ್ ಹಾಕಿಕೊಂಡು ಹೋಗಿದ್ದರು ಹೀಗೆ ಆಸ್ಪತ್ರೆ ವ್ಯವಸ್ಥೆ ಬಗ್ಗೆ ಹೇಳುತ್ತಿದ್ದರು ಮಾನ್ಯ ರಾಚಯ್ಯನವರೇ ನೀವು ಯಾವತ್ತಾದರೂ ಆಲ್ಲಿಗೆ ಹೋಗಿದ್ದರು ನಿಮಗೆ ಶಕ್ತಿ ಇದ್ದರೆ ಇದಕ್ಕೆ ಕಾರಣರಾದವರನ್ನು ನೇಣುಹಾಕಿ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ ಶ್ರೀಮತಿ ನಾಗರತ್ನಮ್ಮನವರಂ ಯಾವತ್ತಾದರೂ ನಾನು ಆಲ್ಲಿಗೆ ಹೋಗಿದ್ದೇನೇ ಎಂದು ಕೇಳಿದರು ನಾನು ಆರೋಗ್ಯ ಮಂತ್ರಿಯಾಗುವ ಮುಂಚೆಯೂ ಹೋಗಿದ್ದೆ ಆರೋಗ್ಯ ಮಂತ್ರಿಯಾದ ಮೇಲೂ ಕೂಡ ಎಲ್ಲಾ ಭಾಗಗಳಿಗೆ ಹೋಗಿ ನೋಡಿದ್ದೇನೆ ಇದೆಲ್ಲಾ ಹಿಂದಿನಿಂದ ನಡೆದುಕೊಂಡು ಬಂದಿದ ಬಂದೇ ಸಲ ಸರಿ ಮಾಡುವುದು ಕಷ್ಟವಾಗುತ್ತದೆ ಆದಕ್ಕೋಸ್ಕರ ಕೆಂಪೇಗೌಡರಿಗೆ ಆಪರೇಷನ್ ಆಗುತ್ತಿದ್ದಾಗ ಎಲೆಕ್ಟ್ರಿಷಿಟಿ ಫೇಲ್ಯೂರ್ ಆಗಿ ಜನರೇಟರ್ ಕೈಗೆ ಸಿಕ್ಕದೆ ತೊಂದರೆಯಾಯಿತು ಎಂಬುದನ್ನು ಒಪ್ಪಿಕೊಳ್ಳುತ್ತೇನೆ ಆಪರೇಷನ್ ಥೇಟರಿನಲ್ಲಿ ೧೦ ಟೇಬಲ್ ಇದ. ಆಪರೇಷನ್ಸ್ ಟೇಬಲ್ಸ್ ಕೂಡ ಸರಿಯಾಗಿಲ್ಲ ಮತ್ತು ಅನೆಸ್ತೇಶಿಯಾಗೆ ಸಂಬಂಧಪಟ್ಟ ಮೆಷಿನ್‌ಗಳು ಕೂಡ ಅಲ್ಲಿ ಇಲ್ಲ. ಈ ಎಲ್ಲವನ್ನೂ ಸರಿಮಾಡಬೇಕಾದರೆ ನನಗೆ ದುಡ್ಡು ಬೇಕು ಅಲ್ಲಿ ಅವ್ಯವಸ್ಥೆ ಇದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ. ರಾಚಯ್ಯ.—ಇದನ್ನು ಬಗೆಹರಿಸಬೇಕಾದರೆ ಪ್ರತಿ ವರ್ಷದ ಬಡ್ಜೆಟ್ಟಿನಲ್ಲಿ ಈ ಕೆಲಸಗಳನ್ನು ಸೇರಿಸಿ ಮಾಡಬೇಕಾಗಿತ್ತು ಒಂದೇ ಸಾರಿ ಎಲ್ಲವನ್ನೂ ಸರಿ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಆಸ್ಪತ್ರೆಗಳಲ್ಲಿ ಯಾವಯಾವ ಉಪಕರಣಗಳು ಕೆಟ್ಟಿವೆ ಅದನ್ನು ಸರಿಪಡಿಸುವುದಕ್ಕೆ ಮತ್ತು ಆಲ್‌ಟರ್ನೇಟೀವ್ ಆಗಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಮತ್ತು ಆಸ್ಪತ್ರೆಯಲ್ಲಿರತಕ್ಕಂತಹ ಚರಂಡಿಗಳು ಮತ್ತು ಕಕ್ಕಸ್‌ಗಳು ಏನೂ ಒಡೆದು ಹೋಗಿವೆ ಅವುಗಳನ್ನು ರಿಪೇರಿ ಮಾಡಲು ಲೋಕೋಪಯೋಗಿ ಇಲಾಖೆಯವರಿಗೆ ಬರೆದಿದ್ದೇನೆ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್. –ಉತ್ತರ ಬಹಳ ಭಯಂಕರವಾಗಿ ಇದೆ ಇಷ್ಟು ದುರವಸ್ಥೆಯಲ್ಲಿ ಆಪರೇಷನ್ ಥಿಯೇಟರ್ ಇದ್ದರೆ ಆ ಆಸ್ಪತ್ರೆಯನ್ನು ಮುಚ್ಚಿ ದುಡ್ಡು ಬಂದ ಕಾಲಕ್ಕೆ ರಿಪೇರಿ ಮಾಡಿಸಿ.

(ಗೊಂದಲ)

ಅಧ್ಯಕ್ಷರು.—ನಿಮಗೆ ಉತ್ತರ ಬೇಕೋ ಬೇಡವೋ ?

ಶ್ರೀ ಕೆ. ಹೆಚ್, ಶ್ರೀನಿವಾಸ್.—ಉತ್ತರ ಬೇಡ ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ದುಡ್ಡು ಕೊಡದ ಹೊರತು ಏನೂ ಆಗಂವುದಿಲ್ಲ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ದುಡ್ಡು ಕೊಡದ ಹೊರತು ಏನೂ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ ಅದನ್ನು ಮುಚ್ಚಿಸಿ ಏನಾದರೂ ಹೆಚ್ಚೂ ಕಡಿಮೆಯಾಗಿ ಸೆಪ್ಟಿಕ್ ಆದರೆ ತೊಂದರೆ ಯಾಗುತ್ತದೆ.

ಶ್ರೀ ಬಿ. ರಾಚಯ್ಯ.—ಒಬ್ಬ ಅಧಿಕಾರಿಯನ್ನು ನೇಮಿಸಿದ್ದೇನೆ ಇದನ್ನು ರಿಪೇರಿ ಮಾಡಂವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇನೆ ಶ್ರೀಮತಿ ನಾಗರತ್ನಮ್ಮನವರು ಹೇಳಿದರು ಅಲ್ಲಿ ಮೂಗೂ ಮುಚ್ಚಿಕೊಂಡು ಹೋಗಬೇಕೆಂದು ಅದನ್ನು ಎಷ್ಟು ಕಡಿಮೆ ಮಾಡಬೇಕೋ ಅಷ್ಟನ್ನು ಮಾಡುತ್ತಿದ್ದೇನೆ ಫೆನಾಯಿಲ್ ಕೂಡ ಹಾಕಿಸಿರಲಿಲ್ಲ, ಅದನ್ನು ಹಾಕಿಸಿದ್ದೇನೆ ಕ್ಲಾಸ್-ಳಿ ಎಂದು ಏನು ಇದ್ದಾರೆ ಅವರನ್ನು ಹತೋಟಿಗೆ ತರಬೇಕಾದರೂ ಕೂಡ ಕಷ್ಟವಿದೆ ಇದನ್ನೆಲ್ಲಾ ಸರಿ ಮಾಡುವುದಕ್ಕೋಸ್ಕರ ಯಾರಿಗಾದರೂ ಒಟ್ಟಿಗೆ ಕಾಂಟ್ರಾಕ್ಟ್ ಕೊಡಬೇಕೆಂಬ ಯೋಚನೆ ಮಾಡುತ್ತಿದ್ದೇನೆ. ಅವ್ಯವಸ್ಥೆ ಇದೆ ಎಂದು ಒಪ್ಪಿಕೊಳ್ಳುತ್ತೇನೆ ಅದನ್ನು ಸರಿಪಡಿಸುತ್ತೇನೆ ಬಟ್ಟು ಹೋಗುವುದಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಹಾಟೇಲ್.—ಈಗ ಇಂತಹ ಅನೇಕ ಆಸ್ಪತ್ರೆಗಳು ಈ ರಾಜ್ಯದಲ್ಲಿ ಇವೆ. ಇವನ್ನು ಸರಿ ಮಾಡಲು ಹಣವಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇಂತಹ ಪರಿಸ್ಥಿತಿ ಯಲ್ಲಿ ಆಸ್ಪತ್ರೆಗಳನ್ನು ಇಟ್ಟುಕೊಂಡರೆ ಜನರಿಗೆ ತೊಂದರೆಯಾಗುತ್ತದೆ. ವಕೀಲರು ತಪ್ಪು ಮಾಡಿದರೆ ಅಪೀಲ್ ಹಾಕುತ್ತಾರೆ. ಡಾಕ್ಟರ್ಸ್ ತಪ್ಪು ಮಾಡಿದರೆ ಯಾರಿಗೆ ಅಪೀಲ್ ಹಾಕಬೇಕು. ಇಂತಿಂತಹ ಆಸ್ಪತ್ರೆಗಳು ಅವಶ್ಯಕ್ಕ ಇದೆಯೆಂದು ಪಬ್ಲಿಷ್ ಮಾಡಲಿ, ಅಲ್ಲಿಗೆ ಸಾಯಂಬೇಕಾದವರು ಹೋಗಿ, ಇರ ಬೇಕಾದವರು ಹೋಗಬೇಡಿ ಎಂದು. ಮೆಡಿಕಲ್ ಕಾಲೇಜುಗಳಲ್ಲಿ ಲಕ್ಷಗಟ್ಟಲೆ ಹಣ ತೆಗೆದುಕೊಳ್ಳು ತ್ತಾರೆ. ಮೈಸೂರಿನಲ್ಲಿ ಹಣ ಸಂಗ್ರಹಿಸುವುದು ನಡೆಯುತ್ತಿದೆ. ಎಷ್ಟು ಮಂದಿ ಮೆಡಿಕಲ್ ಕಾಲೇಜ್ ನಡೆಸುತ್ತಿದ್ದಾರೆ ಅವರ ಮನೆಯನ್ನು ಜಪ್ತಿ ಮಾಡಿ, ಅದನ್ನು ಇವುಗಳಿಗೆ ಉಪಯೋಗಿಸಿ. ಕ್ಲಾಸ್-ಳಿ, ಡಾಕ್ಟರ್‌ಗಳನ್ನು ಹತೋಟಿಯಲ್ಲಿಡುವುದು ಕಷ್ಟವೆಂದು ಹೇಳುತ್ತಾರೆ. ಹಾಗಾದರೆ ರಾಜೀನಾಮೆ ಕೊಟ್ಟು ಹೊರಕ್ಕೆ ಬನ್ನಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ. ಅಲ್ಲಿರುವವರನ್ನು ವರ್ಗ ಮಾಡಿದರೆ ದಾರಿ ತಪ್ಪುತ್ತದೆ ಎಂದು ಹೇಳುತ್ತಿದ್ದಾರೆ. ತಮಗೆ ಬೇಕಾದವರನ್ನು ಇಲ್ಲಿ ಉಳಿಸಿಕೊಳ್ಳಬೇಕೆಂಬುದರಿಂದಾಗಿ ದಾರಿ ತಪ್ಪುತ್ತಿದೆ. ಒಂದೇ ರೂಲ್ ಅನ್ನು ಹಾಕಿಕೊಂಡು ಅದರ ಪ್ರಕಾರ ಮಾಡಿದರೆ ತಪ್ಪಾಗುವುದಿಲ್ಲ. ಅವರ ಜಾತಿಯವರನ್ನು ಅಲ್ಲಿಗೆ ಹಾಕಿದ್ದಾರೆ ಎಂದು ಹೇಳಿ ನಮ್ಮ ಹತ್ತಿರ ಬಂದು ಹೇಳುತ್ತಾರೆ. ಒಂದೇ ತರಹ ಎಲ್ಲರನ್ನೂ ಟ್ರಾನ್ಸ್‌ಫರ್ ಮಾಡಿದರೆ ಯಾರೂ ದಾರಿ ತಪ್ಪುವುದಿಲ್ಲ.

೧೨-೩೦ ಪಿ. ಎಂ.

ಅಧ್ಯಕ್ಷರು.—ಈಗ ಪರದಿಗಳನ್ನು ಒಪ್ಪಿಸುವುದು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು.—ಮಂತ್ರಿಗಳು ಸಮಂಜಸವಾದ ಉತ್ತರ ಕೊಟ್ಟಿದ್ದಾರೆ. ಲೋಪದೋಷಗಳು ಇದ್ದರೆ ಸರಿಪಡಿಸುತ್ತೇನೆ ಎಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಾನು ಏನು ಕೇಳುತ್ತಿದ್ದೇನೆ ಎಂದರೆ...

(ಗೊಂದಲ)

MR. SPEAKER,—It will not go on record. It will not go on record.

ಒಬ್ಬ ಮಾನ್ಯ ಸದಸ್ಯರು —ಯಾವ ವಿಧಾನವನ್ನು ತಾವು ಅನುಸರಿಸುತ್ತೀರಿ ಎಂಬುದನ್ನು ಹೇಳಬೇಕು.

ಅಧ್ಯಕ್ಷರು.—ಅವರ ಉದ್ದೇಶ ಮತ್ತು ನಿಮ್ಮ ಉದ್ದೇಶ, ಆಸ್ಪತ್ರೆ ಸುಧಾರಣೆ ಮಾಡಬೇಕೆನ್ನುವುದು. ಅಲ್ಲಿರತಕ್ಕಂಥ ಲೋಪದೋಷಗಳು ನಮ್ಮ ನಜರಿಗೆ ಬಂದಿವೆ, ಅವನ್ನು ಸರಿಪಡಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದಕ್ಕಿಂತ ಇನ್ನೇನು ಬೇಕು. ಅಶ್ಯೂರೆನ್ಸ್‌ನ್ನು ಕೊಟ್ಟಿಬಿಟ್ಟಿದ್ದಾರೆ ಮಾನ್ಯ ರಮೇಶ್‌ಕುಮಾರ್‌ರವರೇ, ವರದಿಯನ್ನು ಒಪ್ಪಿಸಿರಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೆಂಗಳೂರು ಡೆಂಟಲ್ ಕಾಲೇಜಿನ ರೋಗಿಗಳ ಚಿಕಿತ್ಸಾ ಮಟ್ಟದ ಬಗ್ಗೆ.

೧೦೯. ಶ್ರೀ ಪ್ರಭಾಕರ್ ಎಸ್. ರಾಣೆ (ರೋಣ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಡೆಂಟಲ್ ಕಾಲೇಜಿನಲ್ಲಿ ರೋಗಿಗಳಿಗೆ ನೀಡುತ್ತಿರುವ ಚಿಕಿತ್ಸಾ ಮಟ್ಟವು ದಿನೇ ದಿನೇ ಕುಸಿಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಸದರಿ ಕಾಲೇಜಿನ ಕ್ಯಾಂಟೀನಿನ ಟೆಂಡರನ್ನು ವರ್ಷಕ್ಕೊಮ್ಮೆ ಕರೆದು, ಟೆಂಡರಿನಲ್ಲಿ ಅರ್ಹರಾದವರಿಗೆ ಕ್ಯಾಂಟೀನ್ ನಡೆಸಲು ಅನುಮತಿ ನೀಡುವಂತೆ ಕಾಲೇಜಿನಲ್ಲಿ ಕಾನೂನು ಇರುವುದು ನಿಜವೆ ?

ಈ) ಹಾಗಿದ್ದಲ್ಲಿ ಮೇಲ್ಕಂಡ ಕ್ಯಾಂಟೀನಿನ ಟೆಂಡರನ್ನು ಸುಮಾರು ಎಂಟು ವರ್ಷಗಳಿಂದ ಕರೆಯದೆ ಎಂಟು ವರ್ಷಗಳಿಂದ ಒಬ್ಬರೇ ಕ್ಯಾಂಟೀನನ್ನು ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಮೇಲ್ಕಂಡ ಕರ್ತವ್ಯ ಲೋಪಕ್ಕೆ ಜವಾಬ್ದಾರರಾರೆಂಬುದನ್ನು ಪತ್ತೆ ಹಚ್ಚಿ ಸರ್ಕಾರದವರು ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕಂಟುಂಬ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಮೇಲಿನ (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.

ಇ) ದಂತ ವಿದ್ಯಾಲಯದ ಉಪಹಾರ ಗೃಹವನ್ನು ವಿದ್ಯಾರ್ಥಿ ಸಂಘದ ವತಿಯಿಂದ ನಡೆಸುತ್ತಿರುವುದರಿಂದ ಟೆಂಡರ್‌ರನ್ನು ಕರೆಯಲಾಗಲಿಲ್ಲ.

ಈ) ಉ) (ಇ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದಕ್ಕೆ ಉತ್ತರವಿಲ್ಲ.